ಕರ್ನಾಟಕ ವಿಧಾನಸಭೆ

ಗುರುವಾರ 6ನೇ ಜನವರಿ 2011ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಮಧ್ಯಾಹ್ನ 12 ಗಂಟೆಗೆ ಸಮಾವೇಶಗೊಂಡಿತು.

ವಿಧಾನ ಮಂಡಲದ ಉಭಯ ಸದನಗಳನ್ನುದ್ದೇಶಿಸಿ ರಾಜ್ಯಪಾಲರು ಮಾಡಿದ ಭಾಷಣದ ಅಧಿಕೃತ ವರದಿ

ಮಾನ್ಯ ರಾಜ್ಯಪಾಲರ ಆಗಮನ

ಘನತೆವೆತ್ತ ರಾಜ್ಯಪಾಲರು ಮಧ್ಯಾಹ್ನ 12.00 ಗಂಟೆಗೆ ವಿಧಾನಸೌಧದ ಮಹಾದ್ವಾರದ ಬೃಹತ್ ಮೆಟ್ಟಿಲುಗಳ ಬಳಿಗೆ ಆಗಮಿಸಿದರು. ಸನ್ಮಾನ್ಯ ರಾಜ್ಯಪಾಲರು ತಮ್ಮ ಕಾರಿನಿಂದ ಇಳಿದ ಬಳಿಕ ಅವರನ್ನು ಮಾನ್ಯ ಸಭಾಧ್ಯಕ್ಷರು, ಮಾನ್ಯ ಸಭಾಪತಿಯವರು ಮತ್ತು ವಿಧಾನಸಭೆಯ ಕಾರ್ಯದರ್ಶಿಯವರು ಹಾಗೂ ವಿಧಾನ ಪರಿಷತ್ತಿನ ಕಾರ್ಯದರ್ಶಿಯವರು ಸ್ವಾಗತಿಸಿ, ಮಹಾದ್ವಾರದ ಬಳಿ ಕರೆದುಕೊಂಡು ಬಂದರು. ಅಲ್ಲಿ ಕೆಳಕಂಡ ಕ್ರಮದಲ್ಲಿ ಮೆರವಣಿಗೆಯನ್ನು ರೂಪಿಸಲಾಯಿತು.

ಶ್ರೀ ಎಸ್.ಬಿ. ಪಾಟೀಲ್
ವಿಧಾನಸಭೆಯ ಕಾರ್ಯದರ್ಶಿ

ಶ್ರೀ ವಿ. ಶ್ರೇಶ್
ವಿಧಾನ ಪರಿಷತ್ತಿನ ಕಾರ್ಯದರ್ಶಿ

ಶ್ರೀ ಕೆ.ಜಿ. ಬೋಪಯ್ಯ
ಮಾನ್ಯ ಸಭಾಧ್ಯಕ್ಷರು

ಶ್ರೀ ಡಿ.ಹೆಚ್. ಶಂಕರಮೂರ್ತಿ
ಮಾನ್ಯ ಸಭಾಪತಿಯವರು

ಸನ್ಮಾನ್ಯ ಶ್ರೀ ಹೆಚ್.ಆರ್. ಭಾರದ್ವಾಜ್
ರಾಜ್ಯಪಾಲರು

ಶ್ರೀ ಬಿ.ಎಸ್. ಯಡಿಯೂರಪ್ಪ
ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಎಸ್. ಸುರೇಶ್‌ಕುಮಾರ್
ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು

ಎ.ಡಿ.ಸಿ.

ಈ ರೀತಿ ಮೆರವಣಿಗೆಯು ವಿಧಾನಸಭಾ ಸಭಾಂಗಣದ ಕಡೆಗೆ ಆಗಮಿಸಿತು. ಸಭಾ ಸದನದ ದ್ವಾರದ ಬಳಿ ಮೆರವಣಿಗೆ ಬಂದ ಕೂಡಲೇ ಸನ್ಮಾನ್ಯ ರಾಜ್ಯಪಾಲರ ಆಗಮನವನ್ನು ಮಾರ್ಷಲ್‌ರವರು ಸಭೆಗೆ ತಿಳಿಸಿದರು ಮತ್ತು ರಾಷ್ಟ್ರಗೀತೆಯನ್ನು ನುಡಿಸಲಾಯಿತು. ಸನ್ಮಾನ್ಯ ರಾಜ್ಯಪಾಲರು

ಸದನವನ್ನು ಪ್ರವೇಶಿಸಿ ವೇದಿಕೆಯ ಮೇಲೆ ಕುಳಿತುಕೊಳ್ಳುವತನಕ ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತುಕೊಂಡಿದ್ದರು.

ಸಭಾ ಸದನದ ವೇದಿಕೆಯ ಮುಂದೆ ಬಂದು ಬಳಿಕ ಮೆರವಣಿಗೆಯು ಎರಡು ಭಾಗವಾಗಿ ಬೇರ್ಪಟ್ಟಿತು. ವೇದಿಕೆ ಮೇಲೆ ಮಾನ್ಯ ಅಧ್ಯಕ್ಷರು ಸನ್ಮಾನ್ಯ ರಾಜ್ಯಪಾಲರ ಬಲಭಾಗದಲ್ಲಿಯೂ ಮಾನ್ಯ ಸಭಾಪತಿಯವರು ಸನ್ಮಾನ್ಯ ರಾಜ್ಯಪಾಲರ ಎಡ ಭಾಗದಲ್ಲಿಯೂ ಕುಳಿತುಕೊಂಡರು. ಸನ್ಮಾನ್ಯ ರಾಜ್ಯಪಾಲರು ವೇದಿಕೆಯ ಮಧ್ಯಭಾಗದಲ್ಲಿಯೂ ಕುಳಿತುಕೊಂಡರು. ಉಭಯ ಸದನಗಳ ಕಾರ್ಯದರ್ಶಿಗಳು ವೇದಿಕೆಯ ಮುಂದಿರುವ ಆಸನದಲ್ಲಿ ಕುಳಿತುಕೊಂಡರು.

1. ರಾಜ್ಯಪಾಲರ ಭಾಷಣ

ವಿಧಾನ ಮಂಡಲದ ಉಭಯ ಸದನಗಳನ್ನುದ್ದೇಶಿಸಿ ಸನ್ಮಾನ್ಯ ರಾಜ್ಯಪಾಲರು ಮಾಡಿದ ಭಾಷಣ

ಘನತೆವೆತ್ತ ರಾಜ್ಯಪಾಲರಾದ ಶ್ರೀ ಹೆಚ್.ಆರ್. ಭಾರದ್ವಾಜ್‌ರವರು ಕರ್ನಾಟಕ ವಿಧಾನಸಭೆ ಹಾಗೂ ವಿಧಾನ ಪರಿಷತ್ತಿನ ಸಂಯುಕ್ತ ಅಧಿವೇಶನವನ್ನುದ್ದೇಶಿಸಿ ವಿಧಾನಸಭೆಯ ಸಭಾಂಗಣದಲ್ಲಿ ದಿನಾಂಕ 6-1-2011ರಂದು ಮಧ್ಯಾಹ್ನ 12.00 ಗಂಟೆಗೆ ಮಾಡಿದ ಭಾಷಣ.

His Excellency the Governor: Honourable Mr. Chairman, Honourable Mr. Speaker and Honourable Members,

1. I wish you all a very happy and prosperous new year and Sankranti. It gives me a great pleasure to welcome all of you to this joint session of the Karnataka Legislature.

2. I deem it a privilege to have the opportunity to serve Karnataka and work for the welfare of the citizens of State. My Government has been stiving hard for the last two and a half years for giving good and efficient governance to people.

(ಎಲ್ಲಾ ಮಾನ್ಯ ವಿರೋಧ ಪಕ್ಷದ ಸದಸ್ಯರುಗಳು ಎದ್ದು ನಿಂತು ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತಿದ್ದರು).

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು): ಮಾನ್ಯ ರಾಜ್ಯಪಾಲರೇ ನಿಮ್ಮ ಬಗ್ಗೆ ನಮಗೆ ಅಪಾರವಾದ ಗೌರವವದೆ. ಇದು ಭ್ರಷ್ಟ ಸರ್ಕಾರ... ದಯಮಾಡಿ ಓದಬೇಡಿ.